ಪ್ರಾಸಾಃ1

ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

| | |
|---|---|
| ಸಾಕ್ಷಿದಾರರ ಹೆಸರು | ಪಿ ರಾಜು |
| ತಂದೆಯ ಹೆಸರು | ಲೇಟ್ ಪುಟ್ಟ ಬಸವಯ್ಯ |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಎ.ಎಸ್.ಐ |
| ವಾಸ | ಗಿರಿನಗರ, ಬೆಂಗಳೂರು |

**ದಿನಾಂಕಃ 26.10.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸಅ ಅವರಿಂದಃ**

1. ನಾನು ಅಕ್ಟೋಬರ್ 2018 ರಿಂದ ಜೂನ್ 2019 ರವರೆಗೆ ಮೈಕೊಲೇಔಟ್ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ಈ ಪ್ರಕರಣದ ಆರೋಪಿ ವಿರುದ್ಧ ಉದ್ಘೋಷಣೆ ಮಾಡಲು ನ್ಯಾಯಾಲಯದಿಂದ ವಾರೆಂಟ್ ಬಂದಿರುತ್ತದೆ. ಸದರಿ ವಾರೆಂಟ್ ಅನುಸಾರ ಆರೋಪಿಯ ವಿಳಾಸ ಮನೆ ಸಂಖ್ಯೆಃ8, ಆಫೀಸರ್ ಸ್ಟ್ರಿಟ್, ಲಿಂಗರಾಜ ಪುರ, ಸೆಂಟ್ ಥಾಮತ್ ಟೌನ್, ಬೆಂಗಳೂರು ಇಲ್ಲಿಗೆ ಹೋಗಿ ಅಲ್ಲಿರುವ ಜನರಲ್ಲಿ ಆರೋಪಿಯ ಕುರಿತು ವಿಚಾರಿಸಿದಾಗ ಯಾವುದೇ ಮಾಹಿತಿ ಸಿಗಲಿಲ್ಲ. ನಾನು, ವೇಣು ಮತ್ತು ನಾಗಣ್ಣ ಎಂಬ ಇಬ್ಬರು ಪಂಚರನ್ನು ಸ್ಥಳದಲ್ಲಿಯೇ ಕರೆದುಕೊಂಡೆ. ಅಲ್ಲಿ ಸೇರಿದ ಜನರ ಮುಂದೆ ಆರೋಪಿಯ ಹಾಜರಾತಿ ಸಲುವಾಗಿ ನೀಡಿದ ಉದ್ಘೋಷಣೆಯನ್ನು

ಜೋರಾಗಿ ಕೂಗಿ ಹೇಳಿದೆವು. ನಂತರ ಸದರಿ ಉದ್ಘೋಷಣೆಯ ಬಿತ್ತಿ ಪತ್ರಗಳನ್ನು ಅಲ್ಲಿರುವ ಆರೋಪಿಯ ವಿಳಾಸದ ಮನೆಯ ಗೋಡೆಗೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ಅಂಟಿಸಿದೆನು. ಈ ಕುರಿತು ಪಂಚನಾಮೆಯನ್ನು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.00 ರವರೆಗೆ ಜರುಗಿಸಿದೆನು.

**3. ಉದ್ಘೋಷಣೆಯ ಆದೇಶವನ್ನು ನಿಪಿ-1, ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ)ಎಂದು ಗುರುತಿಸಲಾಯಿತು.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)

**ಮು. ಮ. ಚಂ. ನ್ಯಾ. ಬೆಂ. ನಗರ.**